ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,

ಪೊನ್ನಂಪೇಟೆ

**ಸಿ.ಸಿ. ನಂ.729/2024** **ಪ್ರಾ.ಸಾ –5**

**ಚಾ.ಸಾ – 8**

ದಿನಾಂಕಃ **19.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಶಶಿಕುಮಾರ್ |
| ತಂದೆಯ ಹೆಸರು | : | ಶಿವಣ್ಣ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಎಂ. ಜಿ. ನಗರ ಪೊನ್ನಂಪೇಟೆ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸಾಕ್ಷಿ ಅಮಾನತು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 30 ಎಂದು, ಸಹಿಯನ್ನು ನಿ. ಪಿ. 30(ಎ) ಎಂದು ಗುರುತಿಸಲಾಯಿತು. ದಿ. 04.11.2023 ರಂದು ನಿ ಪಿ 30 ಕ್ಕೆ ಪೊನ್ನಂಪೇಟೆ ಪೊ. ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರು ಆರೋಪಿಯ OPPO ಮೊಬೈಲ್ ಅನ್ನು ಅಮಾನತುಪಡಿಸುವ ವಿಚಾರವಾಗಿ ಠಾಣೆಗೆ ಕರೆಸಿದ್ದು ನನ್ನ ಸಮಕ್ಷಮ ಅಮಾನತುಮಾಡಿಕೊಂಡರು. ಈ ದಿನ ನ್ಯಾಯಾಲಯದಲ್ಲಿ ಸೀಲು ಹಾಕಿ ಇದ್ದಂತಹ ಆ ಫೋನ್ ಅನ್ನು ತೆಗೆದು ನೋಡಲಾಗಿ ಸಾಕ್ಷಿ ಅದನ್ನು ಗುರುತಿಸಿರುತ್ತಾರೆ ಅದನ್ನು ಮು. ಮಾ 2 ಎಂದು ಗುರುತಿಸಲಾಯಿತು. ಮಹಜರ್ ವೇಳೆ ಫೋಟೋ ತೆಗೆದಿರುತ್ತಾರೆ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 31 ಮತ್ತು 32 ಎಂದು ಗುರುತಿಸಲಾಯಿತು. ಆರೋಪಿಯ ಸಮಕ್ಷಮ ಈ ಅಮಾನತುಮಾಡಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್. ವಕೀಲರಿಂದಃ ಪೊಲೀಸರು ಆರೋಪಿಯಿಂದ ನನ್ನ ಸಮಕ್ಷಮ ಮು. ಮಾ 2 ಫೋನ್ ಅನ್ನು ವಶಪಡಿಸಿಕೊಂಡರು. 10.45 ರಿಂದ 11.45 ರ ತನಕ ಮಹಜರ್ ಬರೆದರು. ಮೊಬೈಲ್ ಅನ್ನು ವಶಪಡಿಸಿಕೊಂಡ ಬಗ್ಗೆ ಮಹಜರ್ ನಲ್ಲಿ ಬರೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ

ಮು. ಮಾ 2  ಫೋನ್ ಅನ್ನು ಅಮಾನತುಪಡಿಸಿಕೊಂಡರು.  ಸಿಮ್ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಹೇಳಿದ ಸಾಕ್ಷ್ಯ ಸುಳ್ಳಾಗಿರುತ್ತದೆ ಆ ರೀತಿ  ಯಾವುದೇ ಅಮಾನತಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ -

ಮು. ಮಾ 2 ರ ಜೊತೆ 2 ಸಿಮ್‌ಗಳನ್ನು ಸಹ ವಶಪಡಿಸಿಕೊಂಡರು ಎಂದರೆ ಸರಿ. ಆ ಸಿಮ್‌ಗಳನ್ನು ಮು ಮಾ 3 ಮತ್ತು 4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್. ವಕೀಲರಿಂದಃ

ಅಮಾನತುಪಡಿಸಿಕೊಂಡ ಸಿಮ್ ಗಳು ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ